ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು-09

ಸಂಖ್ಯೆ:ಸಿಎಸಿ-05/ಬಿ.ಇಡಿ.ದಾ./01/2022-23 ದಿನಾಂಕ:16-03-2023

**2022-23ನೇ ಸಾಲಿನ ಬಿ.ಇಡಿ ಕೋರ್ಸಿನ ಅಂತಿಮ ಸುತ್ತಿನ ದಾಖಲಾತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು**

2022-23ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಆರನೇ ಸುತ್ತಿನಲ್ಲಿ ದಾಖಲಾತಿ ಪ್ರಕ್ರಿಯೆ ನಡೆಸುವ ಸಂಬಂಧ ದಿನಾಂಕ:09-03-2023 ರಂದು ಕಾಲೇಜು ಸಹಿತ ಸೀಟು ಹಂಚಿಕೆ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಪಟ್ಟಿಯಲ್ಲಿನ ಅಭ್ಯರ್ಥಿಗಳು ಸೀಟು ಹಂಚಿಕೆಯಾದ ಕಾಲೇಜಿಗೆ ಜಿಲ್ಲಾ ವ್ಯವಸ್ಥಾಪಕ ಕೇಂದ್ರಗಳ ಮೂಲಕ ದಾಖಲಾತಿ ಪಡೆಯಲು ದಿ:10-03-2023 ರಿಂದ 14-03-2023 ರವರೆಗೆ ಕಾಲಾವಕಾಶ ನೀಡಲಾಗಿತ್ತು.

ಆರನೇ ಸುತ್ತಿನ ದಾಖಲಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಉಳಿದಿರುವ ಸೀಟುಗಳನ್ನು ಪರಿಗಣಿಸಿ, ಸಂಸ್ಥೆಯವಾರು ಪ್ರವರ್ಗವಾರು [Institution wise remaining seats (category wise)] Seat Matrix ಅನ್ನು ದಿನಾಂಕ:14-02-2023 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು.

ದಿನಾಂಕ:14-03-2023 ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾದ **ಅಂತಿಮ ಸುತ್ತಿನ ದಾಖಲಾತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ನೀಡಲಾದ ಸೂಚನೆಗಳನ್ವಯ** ಹಾಗೂ ಬಿ.ಇಡಿ ದಾಖಲಾತಿಗೆ ಇಚ್ಛಿಸಿ ತಮ್ಮ ಲಾಗಿನ್‌ನಲ್ಲಿ YES ಎಂದು ನಮೂದಿಸಿರುವ ಅಭ್ಯರ್ಥಿಗಳು ಕಾಲೇಜುಗಳಿಗೆ ನೀಡಿರುವ ಮರು ಆದ್ಯತೆಯನ್ನು ಪರಿಗಣಿಸಿ, ಅಂತಿಮ ಸುತ್ತಿನ ದಾಖಲಾತಿ ಪ್ರಕ್ರಿಯೆಗಾಗಿ ಕಾಲೇಜು ಸಹಿತ ಸೀಟು ಹಂಚಿಕೆ ಪಟ್ಟಿಯನ್ನು ದಿ:16.3.2023 ರಂದು ವೆಬ್‌ಸೈಟ್ https://schooleducation.kar.nic.inನಲ್ಲಿ ಪ್ರಕಟಿಸಲಾಗಿದೆ.

**ಅಂತಿಮ ಸುತ್ತಿನ ದಾಖಲಾತಿಗಾಗಿ ಕಾಲೇಜು ಸಹಿತ ಸೀಟು ಹಂಚಿಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ಗಮನಿಸಬೇಕಾದ ಅಂಶಗಳು**

1. ಅಂತಿಮ ಸುತ್ತಿನ ದಾಖಲಾತಿಗಾಗಿ ದಿನಾಂಕ:16-03-2023 ರಂದು ವೆಬ್‌ಸೈಟಿನಲ್ಲಿ ಪ್ರಕಟಿಸಲಾದ ಕಾಲೇಜು ಸಹಿತ ಸೀಟು ಹಂಚಿಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಸೀಟು ಹಂಚಿಕೆಯಾದ ಕಾಲೇಜಿಗೆ ದಾಖಲಾಗಲು ಇಚ್ಛಿಸಿದಲ್ಲಿ ತಮ್ಮ ಮೂಲ ಆನ್‌ಲೈನ್ ಅರ್ಜಿಯ (ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಿದ್ದಲ್ಲಿ, ಅಂತಹ ಅಭ್ಯರ್ಥಿಯು ಕೊನೆಯದಾಗಿ ಸಲ್ಲಿಸಿರುವ ಅರ್ಜಿ) ಮುದ್ರಿತ ಪ್ರತಿಯೊಂದಿಗೆ Annexure-7ರಲ್ಲಿ ತಮ್ಮ ಮೂಲದಾಖಲೆಗಳನ್ನು ಜೋಡಿಸಿಕೊಂಡು ಒಂದು ಸೆಟ್ ಜೆರಾಕ್ಸ್ ಪ್ರತಿಯೊಂದಿಗೆ **ಜಿಲ್ಲಾ ವ್ಯವಸ್ಥಾಪಕ (DIET/CTE) ಕೇಂದ್ರಗಳಲ್ಲಿ ದಿನಾಂಕ:17-03-2023 ರಿಂದ 18-03-2023** (ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ) **ರೊಳಗೆ ಪರಿಶೀಲನೆಗೆ ಹಾಜರಾಗಿ,** ಮೂಲದಾಖಲೆಗಳನ್ನು ಪರಿಶೀಲನಾಧಿಕಾರಿಯ ಮುಂದೆ ಪರಿಶೀಲನೆಗೆ ಒಳಪಡಿಸುವುದು.
2. ಅಭ್ಯರ್ಥಿಯ ಮೂಲದಾಖಲೆಗಳ ಪರಿಶೀಲನೆಯ ನಂತರ, **(ಆನ್‌ಲೈನ್ ಅರ್ಜಿಯಲ್ಲಿ ಅಭ್ಯರ್ಥಿಯು ನೀಡಿದ್ದ ಮಾಹಿತಿಯಂತೆ ಸೂಕ್ತ ದಾಖಲೆ ಸಲ್ಲಿಸಿದ ಮತ್ತು ಪರಿಶೀಲನೆಯ ನಂತರ ರೋಸ್ಟರ್‌ನಲ್ಲಿ ವ್ಯತ್ಯಾಸವಿಲ್ಲದ ಹಾಗೂ ಮೆರಿಟ್ ಕಡಿಮೆಯಾಗದ ಅಭ್ಯರ್ಥಿಗೆ)** ಪರಿಶೀಲನಾಧಿಕಾರಿಯು SBI ಬ್ಯಾಂಕಿನ ದ್ವಿಪ್ರತಿ ಚಲನ್ Generate ಮಾಡಿ ಅಭ್ಯರ್ಥಿಗೆ ನೀಡುವರು. ಈ ರೀತಿ ಚಲನ್ ಪಡೆದ ಅಭ್ಯರ್ಥಿಗಳು ನಿಗದಿತ

ದಿನಾಂಕದೊಳಗೆ ಚಲನ್ ಮೂಲಕ SBI ಬ್ಯಾಂಕಿನಲ್ಲಿ ದಾಖಲಾತಿ ಶುಲ್ಕ ಪಾವತಿಸಿ, ದಾಖಲಾತಿ ಶುಲ್ಕ ಪಾವತಿಸಿದ ಬಗ್ಗೆ ಚಲನ್ ಅನ್ನು ಪರಿಶೀಲನಾಧಿಕಾರಿಯವರಿಗೆ ತೋರಿಸಿದ ನಂತರ ದಾಖಲಾತಿ ಪತ್ರ (Admission Slip) Generate ಮಾಡಿಸಿಕೊಂಡು ದಾಖಲಾತಿ ಪತ್ರದಲ್ಲಿ ಸೂಚಿಸಿರುವ ಅಂತಿಮ ದಿನಾಂಕದೊಳಗೆ ಮೂಲ ದಾಖಲೆಗಳೊಂದಿಗೆ ಹಂಚಿಕೆಯಾದ ಕಾಲೇಜಿಗೆ ದಾಖಲಾಗುವುದು. **(ದಾಖಲಾತಿ ಶುಲ್ಕವನ್ನು ಆನ್‌ಲೈನ್/ಡಿ.ಡಿ ಮುಖಾಂತರ ಪಾವತಿಸಲು ಅವಕಾಶವಿರುವುದಿಲ್ಲ).**

**ಸೂಚನೆ:** ಅಭ್ಯರ್ಥಿಯು ಸೀಟು ಹಂಚಿಕೆಯಾದ ಕಾಲೇಜಿಗೆ ದಾಖಲಾತಿ ಪಡೆಯಲು ಇಚ್ಛಿಸಿ, ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗಿ, ಮೂಲದಾಖಲೆಗಳ ಪರಿಶೀಲನೆಯ ನಂತರ ದಾಖಲಾತಿ ಶುಲ್ಕ ಪಾವತಿಗಾಗಿ ನಿಗದಿತ ಬ್ಯಾಂಕ್ ಚಲನ್ ಅನ್ನು Generate ಮಾಡಿಸಿಕೊಂಡ ಕೂಡಲೇ ಅಂತಹ ಅಭ್ಯರ್ಥಿಯು ಸೀಟು ಹಂಚಿಕೆಯಾದ ಕಾಲೇಜಿಗೆ ದಾಖಲಾಗಿರುತ್ತಾನೆ/ಳೆ ಎಂದು ಸಿ.ಎ.ಸಿ ದತ್ತಾಂಶದಲ್ಲಿ ದಾಖಲಾಗುವುದು. ಅಂತಹ ಅಭ್ಯರ್ಥಿಗಳ ಕಾಲೇಜು ಬದಲಾವಣೆಗೆ ಅವಕಾಶವಿರುವುದಿಲ್ಲ. ಅಭ್ಯರ್ಥಿಗಳು ಶುಲ್ಕದ ಚಲನ್ Generate ಮಾಡಿಸುವ ಮೊದಲೇ ಕಾಲೇಜಿನ ಆಯ್ಕೆಯನ್ನು ಖಾತ್ರಿಪಡಿಸಿಕೊಳ್ಳುವುದು. ಈ ಸಂಬಂಧ ಉದ್ಭವಿಸುವ ಮುಂದಿನ ಆಗುಹೋಗುಗಳಿಗೆ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.

3. ಅಪೂರ್ಣ ದಾಖಲೆಗಳನ್ನು ಸಲ್ಲಿಸುವ ಅಭ್ಯರ್ಥಿಗಳನ್ನು ದಾಖಲಾತಿಗೆ ಪರಿಗಣಿಸಲಾಗುವುದಿಲ್ಲ.
4. ಒಂದು ವೇಳೆ ಮುದ್ರಿತ ಅರ್ಜಿಯು ಕಳೆದು ಹೋದಲ್ಲಿ ಮೇಲೆ ತಿಳಿಸಿದ ವೆಬ್‌ಸೈಟ್‌ನಲ್ಲಿ ನಿಮ್ಮ User ID ಮತ್ತು Password ಗಳನ್ನು ಭರ್ತಿ ಮಾಡಿ ಪ್ರತಿಯನ್ನು ಪಡೆದುಕೊಳ್ಳಬಹುದಾಗಿದೆ.
5. ಒಂದು ವೇಳೆ ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಯು ದಾಖಲಾತಿಗೆ ನಿಗದಿಪಡಿಸಿರುವ ಅರ್ಹತೆಯನ್ನು ಕಳೆದುಕೊಂಡು ಅನರ್ಹರಾದಲ್ಲಿ ದಾಖಲಾತಿಯನ್ನು ನೀಡಲಾಗುವುದಿಲ್ಲ.
6. ದಾಖಲಾತಿ ಪತ್ರವನ್ನು (Admission Slip) ಪಡೆದು ಸಂಬಂಧಪಟ್ಟ ಕಾಲೇಜು/ಸಂಸ್ಥೆಗೆ ನಿಗದಿತ ದಿನಾಂಕದೊಳಗೆ ದಾಖಲಾಗದ ಅಭ್ಯರ್ಥಿಗೆ ಹಂಚಿಕೆಯಾದ ಸೀಟು ತಂತಾನೆ ರದ್ದಾಗುವುದು.
7. ಬಿ.ಇಡಿ ದಾಖಲಾತಿ ಸಂಬಂಧ ಹೆಚ್ಚಿನ ಮಾಹಿತಿಗಳಿಗಾಗಿ ಆಯಾ ಜಿಲ್ಲೆಯ ವ್ಯವಸ್ಥಾಪಕ ಕೇಂದ್ರಗಳ (DIET/CTE) ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸುವುದು.
8. **ದಾಖಲಾತಿ ಶುಲ್ಕ:** ದಾಖಲಾತಿ ಶುಲ್ಕವನ್ನು ಮೂಲದಾಖಲೆಗಳ ಪರಿಶೀಲನೆಯ ನಂತರ ವ್ಯವಸ್ಥಾಪಕ ಕೇಂದ್ರದಲ್ಲಿ ದಾಖಲಾತಿ ಶುಲ್ಕದ ಚಲನ್ (SBI ಬ್ಯಾಂಕ್‌ನ ಚಲನ್) ಅನ್ನು ಪರಿಶೀಲನಾಧಿಕಾರಿಯು ಡೌನ್‌ಲೋಡ್ ಮಾಡಿ ನೀಡಿದ SBI ಬ್ಯಾಂಕ್‌ನಲ್ಲಿ ನಿಗದಿತ ಚಲನ್‌ನಲ್ಲಿ ದಾಖಲಾತಿ ಶುಲ್ಕವನ್ನು ಪಾವತಿಸಬೇಕು. ಇದರ ಹೊರತು, ONLINE/DD ಅಥವಾ ಇನ್ಯಾವುದೇ ರೂಪದಲ್ಲಿ ಪಾವತಿಸಲು ಅವಕಾಶವಿರುವುದಿಲ್ಲ.

| **ದಾಖಲಾತಿ ಶುಲ್ಕದ ವಿವರ** | | | |
|---|---|---|---|
| ಕಲಾ ವಿಭಾಗ | | ವಿಜ್ಞಾನ ವಿಭಾಗ | |
| ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ | ರೂ. 5025/- | ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ | ರೂ. 5175/- |
| ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ | ರೂ. 6025/- | ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ | ರೂ. 6175/- |
| ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ | ರೂ. 10,025/- | ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ | ರೂ. 10,175/- |

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ದಾಖಲಾತಿ ಶುಲ್ಕದ ಬಗ್ಗೆ:**

ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅವರ ಪಾಲಕರ/ಪೋಷಕರ ವಾರ್ಷಿಕ ಆದಾಯ ರೂ. 2,50,000/– ಅಥವಾ ರೂ. 2,50,000/–ಕ್ಕಿಂತ (ರೂ. ಎರಡೂವರೆ ಲಕ್ಷ) ಕಡಿಮೆ ಇದ್ದಲ್ಲಿ ಮಾತ್ರ ದಾಖಲಾತಿ ಸಮಯದಲ್ಲಿ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ. ಆದರೆ ವಾರ್ಷಿಕ ಆದಾಯ ರೂ.2,50,000/– ಕ್ಕಿಂತ (ರೂ. ಎರಡೂವರೆ ಲಕ್ಷ) ಹೆಚ್ಚಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕಾಗುತ್ತದೆ. ಸಾಮಾನ್ಯ ವರ್ಗದಲ್ಲಿ ಬಿ.ಇಡಿ ಕೋರ್ಸಿಗೆ ಆಯ್ಕೆಯಾಗಿ ದಾಖಲಾತಿ ಸಮಯದಲ್ಲಿ ಶುಲ್ಕ ವಿನಾಯಿತಿ ಪಡೆಯಲು ಇಚ್ಛಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

**ದಾಖಲಾತಿ ಸಮಯದಲ್ಲಿ ಯಾವುದೇ ಮೀಸಲಾತಿ ಮತ್ತು ಶುಲ್ಕ ವಿನಾಯಿತಿಗೆ ಅವಶ್ಯಕತೆ ಇರುವ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಮೀಸಲಾತಿ ಸೌಲಭ್ಯವನ್ನು ಮತ್ತು ಶುಲ್ಕ ವಿನಾಯಿತಿ ಸೌಲಭ್ಯವನ್ನು ಅಭ್ಯರ್ಥಿಗಳು ಕಳೆದುಕೊಳ್ಳುವರು. ಇಂತಹ ಸಂದರ್ಭದಲ್ಲಿ ದಾಖಲಾತಿ ಪಡೆಯಲು ಪಾವತಿ ಮಾಡಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.**

**ಈ ಮೇಲ್ಕಂಡ ಅಂಶಗಳ ಜೊತೆಗೆ ಹೆಚ್ಚಿನ** ಮಾಹಿತಿಗಾಗಿ ದಿನಾಂಕ:05–01–2023 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ **"2022–23ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು" ಇದನ್ನು ಗಮನಿಸುವುದು.**

| |
|---|
| 2022–23ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿಗೆ ಸಂಬಂಧಿಸಿದಂತೆ ಇದು ಅಂತಿಮ ಸುತ್ತಿನ ದಾಖಲಾತಿಯಾಗಿದ್ದು, ಈ ಸುತ್ತಿನೊಂದಿಗೆ ಪ್ರಸ್ತುತ ಸಾಲಿನ ದಾಖಲಾತಿ ಪ್ರಕ್ರಿಯೆಯು ಅಂತಿಮಗೊಳ್ಳುವುದು. |

ಸಹಿ/–

ವಿಶೇಷಾಧಿಕಾರಿ